

# ಆಡದ ಜಗಳ



ಅಪ್ಪಂದೇನು ತಪ್ಪು ಪಾಪ? ಅಮ್ಮಂದೇ ಎಲ್ಲ
ಕಳೆದ ನಾಲ್ಕು ದಿನಗಳಿಂದ ಮಾತಾಡ್ತಾ ಇಲ್ಲ

ಅಕ್ಕನ ಕಡೆ ಮದುವೆಗೆ ಹೋಗೋಕ್ ಸೀರೆ ಬೇಕಂತೆ
'ಸಂಬಳಾನೇ ಆಗಿಲ್ವಲ್ಲ' – ನಮ್ಮಪ್ಪನ ಚಿಂತೆ

ಇರಲಿ, ಮದುವೆಗೆ ಹೋಗಿ ಬಾ – ಅಂತಾರೆ ಅಪ್ಪ
ಅಮ್ಮನ ಮುಖ ಕುಂಬಳದಂತೆ ಆಗಿದೆ ದಪ್ಪ

ಕಳೆದ ನಾಲ್ಕು ದಿವಸಗಳಿಂದ ಮಾತೇ ಇಲ್ಲದೆ
ಮನೆನಾ ಅದು ಮೆಣಸಿನ ಹೊಗೆ ಹಾಕಿದ ಹಾಗಿದೆ

ಆಡದ ಜಗಳವೂ ದೊಡ್ಡ ಯುದ್ಧವೇ ಹೊಟ್ಟೆಲೇ ಇದ್ರೆ
ಅನ್ನಿಸಿತು ಗುರೂ ನಿನ್ನೆ ರಾತ್ರಿ ಬರಲಿಲ್ಲ ನಿದ್ದೆ